**ಕರ್ನಾಟಕ ಸರ್ಕಾರ**

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು**

**ಸಂಖ್ಯೆ:ಇ-ಆಡಳಿತ ಎಂ.ಎಸ್ ಟಿ/01/2014-15** **ದಿನಾಂಕ: 29-10-2015**

# ಜ್ಞಾಪನ

ವಿಷಯ: ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಮತ್ತು ಮೈಸೂರು ವ್ಯಾಪ್ತಿಯ ಉಪನಿದೇರ್ಶಕರು ಹಾಗೂ ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿಯ ಸಿಬ್ಬಂದಿ ವರ್ಗದವರಿಗೆ ಗಣಕಯಂತ್ರ ತರಬೇತಿ ನೀಡುವ ಬಗ್ಗೆ.

ಉಲ್ಲೇಖ: ಇ-ಆಡಳಿತ ಕಡತ ಸಂಖ್ಯೆ ಎಂಎಸ್‌ಟಿ/01/2014-15 ಕಂಡಿಕೆ 27 ರಲ್ಲಿನ ಮಾನ್ಯ ಆಯುಕ್ತರ ಆದೇಶದ ಮೇರೆಗೆ.

ಮೇಲಿನ ಉಲ್ಲೇಖದನ್ವಯ ಮಾನ್ಯ ಆಯುಕ್ತರ ಆದೇಶದ ಮೇರೆಗೆ ಮೈಕೋಸಾಫ್ಟ್ ಸಂಸ್ಥೆಯನ್ನು ಸಿಬ್ಬಂದಿ ವರ್ಗದವರಿಗೆ ಗಣಕಯಂತ್ರ ತರಬೇತಿ ನೀಡುವ ಬಗ್ಗೆ ಸಂಪರ್ಕಿಸಲಾಗಿದೆ. ಬೆಂಗಳೂರು ಮತ್ತು ಮೈಸೂರು ಆಯುಕ್ತಾಲಯ ವ್ಯಾಪ್ತಿಯ ಪ್ರತಿ ಉಪನಿದೇರ್ಶಕರ ಕಛೇರಿಯಿಂದ 5 ಸಿಬ್ಬಂದಿ ವರ್ಗದವರಿಗೆ ಹಾಗೂ ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿಯಿಂದ 3 ಸಿಬ್ಬಂದಿ ವರ್ಗದವರಿಗೆ ಗಣಕಯಂತ್ರ ತರಬೇತಿ ಪಡೆಯುವ ಅವಕಾಶವಿರುತ್ತದೆ. ಪ್ರತಿ ತಂಡಕ್ಕೆ 2 ದಿನಗಳಂತೆ ಎಂಎಸ್ ಆಫೀಸ್/ಕನ್ನಡ ನುಡಿ/ಇಂಟರ್‌ನೆಟ್ ಇತ್ಯಾದಿ ತಂತ್ರಾಂಶಗಳ ಬಗ್ಗೆ ಗಣಕ ಯಂತ್ರ ತರಬೇತಿಯನ್ನು ದಿನಾಂಕ:04-11-2015 ರಿಂದ 30-12-2015ರವರೆಗೆ ನೀಡಲು ಉದ್ದೇಶಿಸಿದ್ದು, ಮೈಕ್ರೋಸಾಫ್ಟ್ ಸಂಸ್ಥೆಯವರು ಸದರಿ ತರಬೇತಿಯನ್ನು ನೀಡಲು ಒಪ್ಪಿರುತ್ತಾರೆ.

ಈ ಸಂಬಂಧ ಗಣಕಯಂತ್ರ ತರಬೇತಿ ಅವಶ್ಯವಿರುವ ನಿಗಧಿತ ಸಂಖ್ಯೆಯ ಸಿಬ್ಬಂದಿ ವರ್ಗದವರನ್ನು ಆಯ್ಕೆ ಮಾಡಿ ಜಿಲ್ಲಾವಾರು ಕ್ರೋಢೀಕರಿಸಿದ ಮಾಹಿತಿಯನ್ನು ಇದರೊಂದಿಗೆ ಲಗತ್ತಿಸಿರುವ Excel sheet ನಲ್ಲಿನ ನಮೂನೆಯಲ್ಲಿ ಗಣಕೀಕರಿಸಿ **ತುರ್ತಾಗಿ ದಿನಾಂಕ:2-11-2015 ರೊಳಗೆ ಇ-ಆಡಳಿತ ಶಾಖೆಯ ಹಿರಿಯ ಸಹಾಯಕ ನಿದೇರ್ಶಕರ ಇ-ಮೇಲ್ ಗೆ ಮಾಹಿತಿ ನೀಡಲು ಈ ಮೂಲಕ ತಿಳಿಸಿದೆ. ಇ-ಮೇಲ್ ವಿಳಾಸ- sadpiegov@gmail.com.**

ಮಾನ್ಯ ಆಯುಕ್ತರ ಸೂಚನೆ ಮೇರೆಗೆ ಬೆಂಗಳೂರು ಮೈಸೂರು ವಿಭಾಗದ ಎಲ್ಲಾ 19 ಜಿಲ್ಲೆಗಳ ಸಿಬ್ಬಂದಿ ವರ್ಗದವರ ತರಬೇತಿಯು ಕಡ್ಡಾಯವಾಗಿದ್ದು, ಯಾವುದೇ ಕಾರಣಕ್ಕೂ ವಿಳಂಬವಾಗದಂತೆ ತರಬೇತಿಗೆ ಆಯ್ಕೆ ಮಾಡಿರುವ ಸಿಬ್ಬಂದಿ ವರ್ಗದವರ ಪಟ್ಟಿಯನ್ನು ನೀಡಲು ಈ ಮೂಲಕ ತಿಳಿಸಿದೆ.

**(ಬೆಳ್ಳಶೆಟ್ಟಿ)**

**ಜಂಟಿ ನಿರ್ದೇಶಕರು(ಆಡಳಿತ)**

**ಹಾಗೂ ನೋಡಲ್ ಅಧಿಕಾರಿಗಳು, ಇ-ಆಡಳಿತ ಘಟಕ.**

ಪ್ರತಿಯನ್ನು:

1) ಬೆಂಗಳೂರು ಮತ್ತು ಮೈಸೂರು ಜಿಲ್ಲೆಯ ಎಲ್ಲಾ ಜಿಲ್ಲೆಯ ಉಪನಿದೇರ್ಶಕರಿಗೆ ಸೂಕ್ತ ಕ್ರಮಕ್ಕಾಗಿ

2) ಕಛೇರಿ ಪ್ರತಿ.

**Format for Microsoft Computer Training of Office Staff**

| Slno | Name of the District | Name of Block | Name of the Employee | Designation | Date of Birth |
|---|---|---|---|---|---|
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |